ಹೇಳಬೇಕೆಂದರೆ, ಯಾವುದೂ ಸರಿಯಿಲ್ಲ."

"ಅಂದ್ರೆ?"

ಶ್ರೀಕಂಠ ಉತ್ತರಿಸದೆ, ನಿಟ್ಟುಸಿರು ಬಿಟ್ಟ.

"ವಿಷಯವೇನೆಂದು ಸ್ಪಷ್ಟವಾಗಿ ಏಕೆ ಹೇಳ್ತಿಲ್ಲ?" ನಾಥಜಿ ಕಳವಳದಿಂದ ಕೇಳಿದ.

"ಇವತ್ತು ಕೋಲ್ಕತ್ತದಿಂದ ತಮ್ಮನ ನಾಲ್ಕನೆಯ ಪತ್ರ ಬಂದಿದೆ. ಆದಷ್ಟು ಬೇಗ ನನಗೆ ಕೋಲ್ಕತ್ತಕ್ಕೆ ಬರಲು ತಿಳಿಸಿದ್ದಾನೆ."

"ಸರಿ, ಚಳಿಗಾಲದಲ್ಲಿ ಖುಷಿಯಿಂದ ಹೋಗಿ. ಈಗಂತೂ ಅಲ್ಲಿ ತುಂಬಾ ಬಿಸಿಲಿದೆ." ನಾಥಜಿ ತನ್ನ ಅಭಿಪ್ರಾಯ ಹೇಳಿದ.

"ನಾನೂ ಹೀಗೆಯೇ ಯೋಚಿಸಿದ್ದೆ. ಆದರೆ, ಅವನ ಪತ್ರ ನೋಡಿ, ನಾನು ತಕ್ಷಣ ಹೋಗಬೇಕೆಂದು ಅನ್ನಿಸುತ್ತಿದೆ."

"ಅಲ್ಲ, ಅಂಥ ತುರ್ತು ಏನಿದೆ?"

"ನಿನಗೆ ಗೊತ್ತಿಲ್ಲ. ಗಂಡ ಹೆಂಡತಿ ಇಬ್ಬರೂ ಕತ್ತಲಿರುವಂತೆಯೇ ಮನೆಯಿಂದ ಹೊರಡುತ್ತಾರೆ. ಅವನು ಫ್ಯಾಕ್ಟರಿಗೆ ಹೋಗ್ತಾನೆ, ಹೆಂಡತಿ ಪ್ರೈವೇಟ್ ಶಾಲೆಗೆ ಪಾಠ ಹೇಳಿಕೊಡಲು ಹೋಗ್ತಾಳೆ. ಮಗನನ್ನು ಒಂದು ಕ್ರೇಚಿಗೆ ಹಾಕಿದ್ದರು, ಅಲ್ಲಿ ತಿಂಗಳಿಗೆ ನೂರಾ ಐವತ್ತು ರೂಪಾಯಿಗಳನ್ನು ಕೊಡಬೇಕಿತ್ತು. ಸಂಜೆ ಮನೆಗೆ ಬರುವಾಗ ಅವರು ಮಗನನ್ನು ಅಲ್ಲಿಂದ ಮನೆಗೆ ಕರೆದುಕೊಂಡು ಬರುತ್ತಿದ್ದರು."

"ಸರಿಯೇ. ಇದರಲ್ಲಿ ಕೆಡುಕೇನಿದೆ?"

"ಈಚೆಗೆ ಈ ಕೆಟ್ಟತನ ಪ್ರತಿಯೊಂದು ವಿಷಯದಲ್ಲಿ, ಪ್ರತಿಯೊಂದು ಕೆಲಸದಲ್ಲಿ ನುಗ್ಗಿದೆ. ಕ್ರೇಚಿನವರು 'ಮಕ್ಕಳಿಗೆ ಅದೇನೋ ತಿನ್ನಿಸುತ್ತಾರಂತೆ, ಅದನ್ನು ತಿಂದ ಮಕ್ಕಳು ಹಗಲು ಹೊತ್ತಿನಲ್ಲೂ ಗಾಢ ನಿದ್ರೆ ಮಾಡ್ತಾರಂತೆ; ಹೀಗೆ ಮಕ್ಕಳ ರಂಪಾಟದಿಂದ ಪಾರಾಗುತ್ತಾರಂತೆ, ಮಗುವಿನ ಆರೋಗ್ಯ ಹದಗೆಟ್ಟಿದೆಯಂತೆ, ಮಗು ಬದುಕುವ ಆಸೆಯನ್ನೇ ಕೈಬಿಟ್ಟಿದ್ದೇವೆ' ಎಂದು ಪತ್ರದಲ್ಲಿ ಬರೆದಿದ್ದಾನೆ.

"ಆಶ್ಚರ್ಯ!" ನಾಥಜಿ ಹೇಳಿದ, "ಅವರು ಮಗನನ್ನು ಬೇರೆ ಕ್ರೇಚಿಗೆ ಸೇರಿಸಬೇಕಿತ್ತು. ಎಲ್ಲರೂ ಒಂದೇ ರೀತಿ ಇರಲ್ಲ!"

"ಇಲ್ಲ, ಎಲ್ಲರೂ ಒಂದೇ ರೀತಿ. ಈಗ ತಾಯಿ ನೌಕರಿ ಬಿಟ್ಟರೆ ಏಳೆಂಟು ನೂರು ರೂಪಾಯಿಯಿಂದ ಜೀವನ ನಡೆಯುವುದು ಹೇಗೆ? ಮನೆ ಬಾಡಿಗೆಗೆ ನಾಲ್ಕು ನೂರು ರೂಪಾಯಿ ಹೋಗುತ್ತೆ. ಇಲ್ಲ, ನಾನು ಹೋಗಲೇ ಬೇಕು. ಈ ವೃದ್ಧಾಪ್ಯದಲ್ಲಿ ಮಕ್ಕಳನ್ನು ಸಾಕುವ ಚಾಕರಿ ಮಾಡಬೇಕಾಗಿ ಬಂದರೂ ಪರ್ವಾಗಿಲ್ಲ."

ನಂತರ ಇಬ್ಬರೂ ಪರಸ್ಪರ ನೋಡಿಕೊಂಡರು. ಸ್ವಲ್ಪ ಹೊತ್ತು ಇಬ್ಬರೂ ಮೌನವಾಗಿದ್ದರು.

"ವಾಸ್ತವವಾಗಿ 'ಹನ್ನೊಂದು ಮನೆಗಳ' ಕಾಶ್ಮೀರದ ಕಾಲ ಮತ್ತೆ ಬರಲಿದೆ." ಶ್ರೀಕಂಠ ಹೇಳಿದ, "ಒಂದು ವೇಳೆ ತನಗೂ ಕಾಶ್ಮೀರದಲ್ಲಿ ನೌಕರಿಯೊಂದು ಸಿಕ್ಕಿದ್ದರೆ ಇದನ್ನೆಲ್ಲಾ ನೋಡಬೇಕಾಗುತ್ತಿರಲಿಲ್ಲ. ನಾನು ಅದೆಷ್ಟೋ ಜನರ ಕಾಲು ಹಿಡಿದೆ, ಆದರೆ ಎಲ್ಲವೂ ವ್ಯರ್ಥವಾಯಿತು. ಸ್ವಲ್ಪ ಭೂಮಿ ಉಳಿದಿತ್ತು, ಅದನ್ನು 'ಭೂ ಸುಧಾರಣೆ' ಕಸಿದುಕೊಂಡಿತು. ನಾವೂ ಸಹ ಸುಧಾರಣೆಯ ಪರವಾಗಿದ್ದೇವೆ. ಆದರೆ, ಸುಧಾರಣೆಯಾಗಲಿಲ್ಲ, ನಮ್ಮ ಸರ್ವನಾಶವಷ್ಟೇ ಆಯ್ತು. ಮೊನ್ನೆ ನಾನು ನಮ್ಮ ಮಗಳು ಶೀಲಾಳ ಅತ್ತೆ ಮನೆಗೆ ಹೋಗಿದ್ದೆ. ನಾಲ್ವರು ಸಹೋದರರು ಸಣ್ಣ ಮನೆಯಲ್ಲಿ ಹೇಗಿರುತ್ತಾರೆ ಎಂಬುದನ್ನು ನೋಡಿಯೇ ಅರ್ಥ ಮಾಡಿಕೊಳ್ಳಬೇಕು. ಅವರ ಬಳಿಯಿದ್ದ ಜಮೀನನ್ನು ತೆಗೆದುಕೊಂಡು ಹೋಗಲಾಯಿತು. ಬಡಪಾಯಿಗಳಿಗೆ ಮನೆಯನ್ನು ಕಟ್ಟಿಕೊಳ್ಳಲು ಸಹ ಜಾಗ ಬಿಡಲಿಲ್ಲ. ಇದನ್ನೆಲ್ಲಾ ಯಾರಿಗೆ ಹೇಳುವುದು? ಕೇಳುವವರು ಯಾರು?" ಶ್ರೀಕಂಠನ ಕಂಠ ಒತ್ತಿ ಬಂತು. ಆಕ್ರೋಶ ಮುಖದ ಮೇಲೆ ಮೂಡಿತು.

"...ಮಧ್ಯದವನು ಬೆಂಗಳೂರಿನಲ್ಲಿ ಕೊಳೆಯುತ್ತಿದ್ದಾನೆ. ಆ ದುರದೃಷ್ಟ ಮನುಷ್ಯ ಏನು ಮಾಡುತ್ತಿರಬೇಕೆಂದು ಯೋಚಿಸುತ್ತೇನೆ. ವಯಸ್ಸಿಗೆ ಬಂದ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಅವರಿಗೆ ಮದುವೆಯನ್ನು ಹೇಗೆ ಮಾಡ್ತಾನೆ? ನಿಜ ಹೇಳಬೇಕೆಂದರೆ, ಕೊನೆಗಳಿಗೆಯಲ್ಲಿ ನನಗೆ ಚಿಂತೆ ಕಾಡ್ತಿದೆ. ಜಯಪುರದವನು ಪತ್ರವನ್ನು ಬರೆಯಲ್ಲ. ಪತ್ರ ಬರೆದರೆ ಮುದುಕ ಬಂದು ವಕ್ಕರಿಸ್ತಾನೆ ಅಂತ ಅವನು ಯೋಚ್ನೆ ಮಾಡ್ತಿರಬೇಕು! ಆದರೆ, ನಾನು ಯಾರಿಗೂ ಭಾರವಲ್ಲ. ನಾನು ಬದುಕಿರೋವರೆಗೆ ನನಗೆ ಬರುವ ಪೆನ್ಶನ್ ಸಾಕು." ಶ್ರೀಕಂಠ ಭಾವುಕನಾಗುತ್ತಿರುವುದನ್ನು ಗಮನಿಸಿದ ನಾಥಜಿ,